❖ ಪ್ರಶಾಂತ ಭಟ್ ಹೆಗ್ಗಾರ್

## ತುಲಾ




ಮನಸ್ಸು ಭ್ರಮೆಯಿಂದ ಕಳಚಿಕೊಂಡು ನಿಧಾನವಾಗಿ ವಾಸ್ತವವನ್ನು ಅರ್ಥೈಸಿಕೊಳ್ಳುತ್ತಿದೆ. ಯಾವುದೇ ಅಡೆತಡೆಗಳು ಬಂದರೂ ಜಾಗೃತಿಯಿಂದ ಕೆಲಸ ಮಾಡಿ. ಒಳ್ಳೆಯದೇ ಆಗಲಿದೆ.

ಶುಭ: 6, 18, 24

ಅಶುಭ: 5, 11, 21

## ಮಕರ




ನೀವು ಮುನ್ನಡೆದ ರಭಸಕ್ಕೆ ಕುಟುಂಬದವರೇ ಅಚ್ಚರಿ ಪಡುವರು. ತಾಳ್ಮೆಯಿಂದ ಮುನ್ನಡೆಯಲು ಸಾಹಸ ಪಡುತ್ತಿರುವಾಗ ಮತ್ತೆ ಪರೀಕ್ಷೆಗಳೇ ಎದುರಾದಾವು. ಯಾವುದಕ್ಕೂ ಅಂಜದೇ ಸಾಗಿ.

ಶುಭ: 11, 1, 20

ಅಶುಭ: 8, 6, 13, 22

## ವೃಶ್ಚಿಕ



ಜಗತ್ತು ಎಷ್ಟು ವಿಶಾಲವಾಗಿದೆ ಎಂದು ಅನಿಸಿದರೂ ಅಷ್ಟೇ ಸಂಕುಚಿತವಾಗಿದೆ ಎಂಬುದೂ ನಿಮ್ಮ ಗಮನಕ್ಕೆ ಬರಲಿದೆ. ವ್ಯಕ್ತಿತ್ವದಲ್ಲಿ ಹೊಂದಾಣಿಕೆ ಮಾಡಿಕೊಳ್ಳದೇ ಮುನ್ನಡೆಯಿರಿ. ಶುಭ ಫಲವಿದೆ.

ಶುಭ: 8, 16, 24

ಅಶುಭ: 6, 17, 21

## ಕುಂಭ




ಕಲಿತ ವಿದ್ಯೆ ಎಂದಿಗೂ ನಾಶವಾಗದು ಎಂಬ ಮಾತು ನಿಜವಾಗಲಿದೆ. ಈ ದಾರಿ ಸುಗಮವಿದೆ ಎಂದು ಮೊದಲೇ ನಿರ್ಧಾರ ಮಾಡಬೇಡಿ. ವ್ಯವಹಾರದಲ್ಲಿ ನಿಮ್ಮ ಎಂದಿನ ನಡವಳಿಕೆಯನ್ನು ತುಸು ಬದಲಾಯಿಸಿಕೊಳ್ಳಿ. ಶುಭ ಸಮಯ.

ಶುಭ: 12, 22, 3, 6

ಅಶುಭ: 8, 13, 21

## ಧನು




ದುಷ್ಟರ ಸಂಘದಿಂದ ಎಷ್ಟೇ ದೂರವಿದ್ದರೂ ದುಷ್ಟರ ನೆರಳು ಬೀಳುತ್ತಿದೆ. ಆಪತ್ತಿಗಾದವನೇ ಮಿತ್ರ ಎಂಬ ಮಾತಿಗೆ ಉದಾಹರಣೆಯೂ ಆಗಾಗ ನಿಮಗೆ ಸಿಗುತ್ತಿದೆ. ಖರ್ಚು–ವೆಚ್ಚ ನೋಡಿಕೊಂಡು ಹೊಸ ಕೆಲಸ ಆರಂಭಿಸಿ.

ಶುಭ: 9, 18, 27

ಅಶುಭ : 3, 13, 21

## ಮೀನ



ನಿಮ್ಮ ಋಣಾತ್ಮಕ ವಿಚಾರಗಳೇ ನಿಮಗೆ ಬಾಧಕವಾಗಲಿವೆ. ತಪ್ಪು ನಿಮ್ಮದು ಎಂದು ಗೊತ್ತಾದ ನಂತರ ನೀವು ನಿಮ್ಮ ನಡವಳಿಕೆಯಲ್ಲಿ ಬದಲಾವಣೆ ಮಾಡಿಕೊಂಡ ಪರಿಣಾಮ ನಿಧಾನವಾಗಿ ಕಂಡುಬರಲಿದೆ.

ಶುಭ : 10, 21, 28

ಅಶುಭ: 8, 3, 21